## ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ1320/2017

| | ಪ್ರಾಸಾಃ- | 2 |
|---|---|---|

| | |
|---|---|
| ಹೆಸರು | ಮಹೇಶ್ ಎಂ |
| ತಂದೆಯ ಹೆಸರು | ಮೈಲಾರಪ್ಪ |
| ವಯಸ್ಸು | 37 |
| ಉದ್ಯೋಗ | ಉಪ ವಲಯ ಅರಣ್ಯಾಧಿಕಾರಿ |
| ವಿಳಾಸ | ಹಾರೋಹಳ್ಳಿ |

- - - - - - - - - - - - - - - - - - - - - - - - - - - - - - -

**<u>(ಸಾಕ್ಷಿ ವಿಚಾರಣೆ ಕಲಂ.299 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿ)</u>**

ದಿಃ05.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

**ಮುಖ್ಯ ವಿಚಾರಣೆ ಎಪಿಪಿ ರವರಿಂದಃ-**

2021 ರಿಂದ 2024 ಜುಲೈ ರವರೆಗೆ ಅರಣ್ಯ ಸಂಚಾರಿ ದಳ ಬೆಂಗಳೂರಿನಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

03.08.2022 ರಂದು ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಮೋಹನ್ ಕುಮಾರ್ ಬಿ ಮತ್ತು ಮಂಜುನಾಥ್ ರವರು ಈ ಪ್ರಕರಣದ ಆರೋಪಿ ಕರಿಯಯ್ಯ ಅಲಿಯಾಸ್

ಮುನಿಸ್ವಾಮಿ ರವರಿಗೆ ಸಂಬಂಧಪಟ್ಟಂತೆ ಅವರು ವಾಸವಿದ್ದ ಚಾಮರಾಜನಗರ, ಹನೂರು ತಾಲ್ಲೂಕು, ಮಂಗಲ ಗ್ರಾಮ ಕ್ಕೆ KA-43-G-069 ವಾಹನದಲ್ಲಿ ಹೋಗಿ ಅಲ್ಲಿನ ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿ ಬಳಿ ಆತನ ಬಗ್ಗೆ ವಿಚಾರಿಸಲಾಗಿ, ಆ ಗ್ರಾಮದಲ್ಲಿ ಹಾಗೂ ಅಕ್ಕ ಪಕ್ಕದ ಗ್ರಾಮದಲ್ಲಿ ಆ ಹೆಸರಿನವರು ವಾಸವಿರುವುದಿಲ್ಲ ಎಂದು ತಿಳಿದು, ಅವನ ಬಗ್ಗೆ ಸದರಿ ಸ್ಥಳದಲ್ಲಿ ಉದ್ಘೋಷಣೆ ಯನ್ನು ಹೊರಡಿಸಿ, ಸದರಿ ಊರಿನಲ್ಲಿ ಸರ್ಕಾರಿ ಶಾಲೆ, ಪಂಚಾಯಿತಿ ಕಛೇರಿ ಹಾಗೂ ಸಾರ್ವಜನಿಕರು ಓಡಾಡುವ ಸ್ಥಳದಲ್ಲಿ ಉದ್ಘೋಷಣ ಜೆರಾಕ್ಸ್ ಪ್ರತಿ ಅಂಟಿಸಿ , ಆ ವ್ಯಕ್ತಿಗಳ ಬಗ್ಗೆ ಮಾಹಿತಿ ಸಿಕ್ಕಿದರೆ ಇಲಾಖಾ ಅಧಿಕಾರಿಗಳಿಗೆ ತಿಳಿಸುವಂತೆ ಮಾಹಿತಿ ನೀಡಲಾಯಿತು. ಉದ್ಘೋಷಣೆ ಮಹಜರ್ ಅನ್ನು 2.00 ರಿಂದ 09.30 ರವರೆಗೆ ಪಂಚರ ಸಮಕ್ಷಮ ಮಾಡಲಾಯಿತು.

ಸಾಕ್ಷಿಗೆ ತೋರಿಸುತ್ತಿರುವ ಉದ್ಘೋಷಣೆ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**